ಶೋಭ ಚಂದನ್, ಬಾಳ್ಳುಪೇಟೆ
ದೇವರ ಮುಂದೆ ನಮ್ಮ ಬಯಕೆಗಳನ್ನು ಮಂಡಿಸಬೇಕೋ ನಿಗ್ರಹಿಸಿಕೊಳ್ಳಬೇಕೋ?



ಕೊಡುವವನಿಗೆ ಏನು ಕೊಡಬೇಕೆಂದು ತಿಳಿದಿರುತ್ತದೆ. ಜೀವ ಕೊಟ್ಟಿರುವುದಕ್ಕೆ ಥ್ಯಾಂಕ್ಸ್ ಹೇಳಿ ಸಾಕು.

ಜಯಶ್ರೀ, ಬೆಂಗಳೂರು
ಬೃಹತ್ ಕಟ್ಟಡ ಉರುಳಿಸಲು 9 ಸೆಕೆಂಡ್ ಸಾಕು. ಭ್ರಷ್ಟ ಸರ್ಕಾರ ಉರುಳಿಸಲು?
ಒಂದೇ ಸೆಕೆಂಡ್ ಸಾಕು. ಆದರೆ ಆ ಮಟ್ಟಕ್ಕೆ ನಮ್ಮ ಮತದಾರ ಎಚ್ಚೆತ್ತುಕೊಳ್ಳಲು ಕನಿಷ್ಠ 5 ದಶಕ ಬೇಕು.

ಕೆ.ವಿ. ಗೋವಿಂದಾಚಾರಿ, ಮೈಸೂರು
ದುಬಾರಿ ಕಾರನ್ನು ಶೋರೂಮಿಂದ ತಂದು ಬೀದಿಬದಿಯಲ್ಲಿ ನಿಲ್ಲಿಸುತ್ತಾರಲ್ಲಾ...?
ಶಿವನಿಂದಲೇ ಸ್ಫೂರ್ತಿ — ತನ್ನನ್ನೊಯ್ಯ ನಂದಿ ಚಳಿಮಳೆಬಿಸಿಲೆನ್ನದೆ ಎಂದಿಗೂ ಹೊರಗೇ.

ಮಹಾವೀರ ಕಾಸರ, ಶಿವಮೊಗ್ಗ
ಗಂಡಸಿಗೆ ಮೀಸೆ ಇರಬೇಕು. ಹೆಂಗಸಿಗೆ?



ಅದನ್ನು ತಿರುವದಂತೆ ಇರಿಸುವ ತಾಕತ್ತು.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಚುನಾವಣಾ ಸಮಯದಲ್ಲಿ ಹಂಚುವ ಎಲ್ಲವನ್ನು ಆಮಿಷ ಎನ್ನದೆ 'ಪ್ರತಿಭಾ ಪುರಸ್ಕಾರ' ಎಂದರೆ ಹೇಗೆ?
ಒಪ್ಪಬೇಕಾದ್ದೇ. ತಮ್ಮ ತಲೆಯ ಮೇಲೆ ತಾವೇ ಚಪ್ಪಡಿ ಎಳೆದುಕೊಳ್ಳುವ ವೋಟರ್‌ದು ಕಡಿಮೆ ಪ್ರತಿಭೆಯಲ್ಲ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಎಲ್‌ಐಸಿ ಇದರ ನಿಜವಾದ ಅರ್ಥ?
**Lively, Ill, Cremated;** ಮೂರೂ ಸಂದರ್ಭಗಳಲ್ಲೂ ಉಪಯುಕ್ತವೆಂದು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯನಿಗೆ ಉದ್ಯೋಗ ಇಲ್ಲದಿದ್ದರೆ ಏನಾಗುವುದು ಸರ್?
ಉದ್ವೇಗ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು
ಇಲ್ಲೊಬ್ಬರು ನಡೆಯೋಕೆ 'ಕೈ'ಲಾಗಲ್ಲ ಅಂತಾರಲ್ಲ?
ಹೆಚ್ಚುವರಿ ಕಾಲನ್ನು (ಊರುಗೋಲು) ಕೈಲಿ ಹಿಡಿದರೆ ಆಗುತ್ತದೆ ಎನ್ನಿ.

ಮಹಾವೀರ ಕಾಸರ, ಶಿವಮೊಗ್ಗ
ವೃತ್ತಿಗೂ ಪ್ರವೃತ್ತಿಗೂ ಏನು ವ್ಯತ್ಯಾಸ?
ಒಂದು ದುಡಿತ, ಇನ್ನೊಂದು ತುಡಿತ.

ಕೆ. ಪುರುಷೋತ್ತಮ ರೆಡ್ಡಿ, ಪಾವಗಡ
ಲಗೋರಿ, ಗಿಲ್ಲಿದಾಂಡು, ಸೂರ್‌ಚೆಂಡು ಟೂರ್ನಿ ಉದ್ಘಾಟನೆಗೆ ಸಿನಿತಾರೆ ಬೆರ್ರೋ ರಾಜಕಾರಣಿಯೋ?
ಗಿಲ್ಲಿಸಿಕೊಳ್ಳಲು ತಾರೆಯೇ ಸರಿ. ಕಾಲೆಳೆಯುವ ಕಬಡ್ಡಿಗಾದರೆ ರಾಜಕಾರಣಿ ಬೆಸ್ಟು.

ಹೆಚ್.ಎಮ್. ಚನ್ನವೀರಯ್ಯ, ಹೂವಿನಹಡಗಲಿ
ಸ್ವಾಮಿ ಸುಖೀನೋ ಕಾಮಿ ಸುಖೀನೋ?
ತಪ್ಪನ್ನು ಗುಪ್ತವಾಗಿ ಮಾಡಬೇಕಾಗಿಲ್ಲವಾದ್ದರಿಂದ — ಕಾಮಿಯೇ.

ಹೆಚ್.ವಿ. ಶ್ರೀಧರ್, ಬೆಂಗಳೂರು
ಪ್ರಶ್ನೆಯೊಂದಕ್ಕೆ ಉತ್ತರಿಸಿದ ನಂತರ ಇನ್ನೂ ಒಳ್ಳೆಯ ಉತ್ತರ ಕೊಡಬಹುದಿತ್ತೆಂದು ಎಂದಾದರೂ ಅನಿಸಿದೆಯೆ?
ಹಲವಾರು ಬಾರಿ. ನಿರಂತರ ವಿಕಸನವೇ ಧೀಶಕ್ತಿಯ ವೈಶಿಷ್ಟ್ಯ

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ವಂಚನೆ, ಮೋಸ, ದ್ರೋಹ ಮಾಡುವವರು ಹೆಚ್ಚು ಏಳ್ಗೆ ಹೊಂದುತ್ತಿದ್ದಾರೆ. ಇದಕ್ಕೆ ಅಂತ್ಯವಿಲ್ಲವೆ?
ರಾವಣ, ದುರ್ಯೋಧನರಿಗೆ ಪಟ್ಟಾಭಿಷೇಕವಾದ ನಂತರವೇ ವಿಭೀಷಣ, ಯುಧಿಷ್ಠಿರರದು. ಇದೇ ನಿಯಮ.

## ವಾರದ ಪ್ರಶ್ನೆ

ವಿಜಯಕುಮಾರ್ ಎಚ್.ಕೆ. ರಾಯಚೂರು
ಸೊಳ್ಳೆಯು ಕತ್ತೆ, ಹಂದಿ, ನಾಯಿ, ಎಮ್ಮೆಗಳಿಗೆ ಕಚ್ಚದೆ ಮನುಷ್ಯನಿಗೆ ಮಾತ್ರ ಏಕೆ ಕಚ್ಚುತ್ತದೆ?
ಅವುಗಳ ಬ್ಲಡ್ ಗ್ರೂಪ್ ಅದಕ್ಕೆ ಮ್ಯಾಚ್ ಆಗುವುದಿಲ್ಲವಂತೆ.

ವಿ. ಹೇಮಂತಕುಮಾರ್, ಬೆಂಗಳೂರು
ಇತ್ತೀಚೆಗೆ ಕೆಲವು ಹುಡುಗಿಯರು ಅಂಕಲ್‌ಗಳನ್ನೇ ಮದುವೆ ಆಗುತ್ತಿದ್ದಾರಲ್ಲ?
ಪುರುಷ ಮಾಗಿದಷ್ಟೂ ಪಳಗಿಸುವುದು ಸುಲಭ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಕಡುವೈರಿಯು ಗೆಳೆಯನಾಗುವುದು ಯಾವಾಗ?
ಸಮ್ಮಿಶ್ರ ಸರ್ಕಾರ ರಚಿಸಬೇಕಾದಾಗ.

ಪಿ. ಜಯವಂತ ಪೈ, ಕುಂದಾಪುರ
ವಿದ್ಯಾವಂತರಲ್ಲೇ ಡೈವೋರ್ಸ್ ಜಾಸ್ತಿ. ಏಕೆ?



ವಿದ್ಯೆಗೂ ಬುದ್ಧಿಗೂ ಲಿಂಕ್ ತಪ್ಪಿ ವಿವೇಕ ಮಾಯವಾಗುವುದರಿಂದ.

ಶೃತಿ ರಿಗ್ರೆಟ್ ಐಯ್ಯರ್, ಅಮೇರಿಕಾ
ಅಹಂಕಾರದಿಂದ ಕುರುಡಾದವರಿಗೆ ಕಣ್ಣು ತೆರೆಸುವುದು ಹೇಗೆ?
ಅವರ ಹಿಂಬಾಲಕರನ್ನು ಕೊಂಡುಕೊಳ್ಳಿ. ಚೇಲಾ ಇಲ್ಲದ ಅಹಂಕಾರಿ ಬಾಲವಿಲ್ಲದ ಹಾವು.

ಬಿ.ಆರ್. ಉಷಾ, ಕೆನಡಾ
ಹರಿದ ಬಟ್ಟೆ ಹಾಕಿಕೊಳ್ಳಲು ಬಡವರಿಗೆ ಆಗುವ ನಾಚಿಕೆ ಸಿರಿವಂತರಿಗೆ ಆಗುವುದಿಲ್ಲವಲ್ಲ, ಏಕೆ?
ಕಿಂಡಿಯಿಂದ ಟ್ಯಾಟೂ ವ್ಯಾಕ್ಸಿಂಗ್ ತೋರಿ.

■ ರಾಮ್